ಊ) ಮೇಲೆ ಹೇಳಿದಂತೆ, ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದಿಂದ ಅನುಮೋದನೆ ದೊರೆತ ನಂತರ ನಿಲ್ದಾಣವನ್ನು ಕಾರ್ಯಾರಂಭಗೊಳಿಸಲಾಗುವುದು.

**ಹೊಸದಾಗಿ ನಿರ್ಮಿಸಿರುವ ವಸತಿ ಬಡಾವಣೆಗಳು**

**765(568) ಶ್ರೀ ಬಂಡೆಪ್ಪ ಕಾಶೆಂಪೂರ್**:(ಬೀದರ್ ದಕ್ಷಿಣ) ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ತಾಲ್ಲೂಕಿನಲ್ಲಿ ಕಳೆದ 2 ವರ್ಷಗಳಲ್ಲಿ ಹೊಸದಾಗಿ ನಿರ್ಮಿಸಿರುವ ಹೊಸ ವಸತಿ ಬಡಾವಣೆಗಳ ಸಂಖ್ಯೆ ಎಷ್ಟು ಮತ್ತು ಅವು ಯಾವುವು (ವಿವರ ನೀಡುವುದು);

ಆ) ಈ ಹೊಸ ಬಡಾವಣೆಗಳಿಗೆ ಖರೀದಿಸಿರುವ ಜಮೀನು ಎಷ್ಟು ಮತ್ತು ಎಲ್ಲೆಲ್ಲಿ ಖರೀದಿಸಲಾಗಿದೆ (ವಿವರ ನೀಡುವುದು);

ಇ) ಈ ಜಮೀನುಗಳನ್ನು ಖರೀದಿಸಲು ಸರ್ಕಾರ ದರ ನಿಗದಿಪಡಿಸಿದೆಯೇ;

ಈ) ಹಾಗಿದ್ದಲ್ಲಿ, ಪ್ರತಿ ಎಕರೆಗೆ ಎಷ್ಟು ದರ ನಿಗದಿಪಡಿಸಲಾಗಿದೆ;

ಉ) ಈ ಹೊಸ ಬಡಾವಣೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆಯೇ;

ಊ) ಹಾಗಿದ್ದಲ್ಲಿ, ಅಭಿವೃದ್ಧಿಯು ಯಾವ ಹಂತದಲ್ಲಿದೆ; (ವಿವರ ನೀಡುವುದು)?

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು(ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು)**

ಅ) ಬೀದರ್ ತಾಲ್ಲೂಕಿನಲ್ಲಿ ಕಳೆದ ಎರಡು ವರ್ಷಗಳಲ್ಲಿ ನಿರ್ಮಿಸಲಾದ ವಸತಿ ಬಡಾವಣೆಯ ವಿವರಗಳು.

1) ಹಳ್ಳದ ಕೆರೆ ಸಂಯುಕ್ತ ವಸತಿ ಬಡಾವಣೆಯನ್ನು ನಿರ್ಮಿಸಲಾಗಿದೆ.

2) ಚಿಟ್ಟಾದಲ್ಲಿ ವಸತಿ ಯೋಜನೆಯನ್ನು ಕೈಗೊಂಡಿದ್ದು ಸರ್ಕಾರದಿಂದ ಅನುಮೋದನೆ ದೊರೆತಿದ್ದು ಕಾರ್ಯಗತಗೊಳಿಸಲಾಗುತ್ತಿದೆ.

3) ಗುನ್ನಳ್ಳಿಯಲ್ಲಿ ಯೋಜನೆಯನ್ನು ಕೈಗೊಳ್ಳುವ ಬಗ್ಗೆ ಟೆಂಡರ್ ಪ್ರಕ್ರಿಯೆಯ ಹಂತದಲ್ಲಿದೆ.

ಆ) 2005-06ನೇ ಸಾಲಿನಿಂದ 2007-08ರವರೆವಿಗೆ ಬೀದರ್ ಜಿಲ್ಲೆ ಬೀದರ್ ತಾಲ್ಲೂಕಿನ ಕೆಳಕಂಡ ಗ್ರಾಮಗಳಲ್ಲಿ ಬಡಾವಣೆ ರಚನೆಗಾಗಿ ಖರೀದಿಸಿದೆ.

| ಕ್ರ. ಸಂ. | ಸಾಲು | ಗ್ರಾಮದ ಹೆಸರು | ಖರೀದಿಸಿದ ವಿಸ್ತೀರ್ಣ |
|---|---|---|---|
| 1 | 2005-06 | ಹಳ್ಳದಕೇರಿ | 23-20 |
| 2 | 2006-07 ರಿಂದ 2008-09 | ಚಿಟ್ಟ | 120-22 |
| 3 | 2007-08 | ಗುನ್ನಳ್ಳಿ | 49-39 |
| | | ಒಟ್ಟು | 194-01 |

ಇ) ಹೌದು, ಈ ಜಮೀನುಗಳನ್ನು ಖರೀದಿಸಲು ಸರ್ಕಾರ ದರ ನಿಗದಿಪಡಿಸಿದೆ.

ಈ) ಈ ಕೆಳಕಂಡ ಗ್ರಾಮದ ಜಮೀನುಗಳಿಗೆ ಸರ್ಕಾರ ಪ್ರತಿ ಎಕರೆಗೆ ದರ ನಿಗದಿಪಡಿಸಿದ್ದು, ವಿವರ ಈ ಕೆಳಗಿನಂತಿದೆ:

| ಗ್ರಾಮದ ಹೆಸರು | ದಿನಾಂಕ | ನಿಗದಿಪಡಿಸಿದ ದರ |
|---|---|---|
| 1.ಹಳ್ಳದಕೇರಿ | 05-09-2005 | ರೂ.6.10 ಲಕ್ಷ |
| 2.ಚಿಟ್ಟ | 15-02-2007 | ರೂ.6.50 ಲಕ್ಷ |
| 3.ಗುನ್ನಳ್ಳಿ | 16-06-2007 | ರೂ.6.50 ಲಕ್ಷ |

ಉ) ಹೌದು, ಅಭಿವೃದ್ಧಿಪಡಿಸಲಾಗುತ್ತಿದೆ.

ಊ) 1) ಹಳ್ಳದಕೇರಿಯಲ್ಲಿ ಕಾಮಗಾರಿಯ ಮುಕ್ತಾಯ ಹಂತದಲ್ಲಿದೆ.

2) ಚಿಟ್ಟಾದಲ್ಲಿ ವಸತಿ ಯೋಜನೆಯನ್ನು ಕೈಗೊಂಡಿದ್ದು, ಜೂನ್ 2010ರ ಮಾಹೆಯಲ್ಲಿ ಅನುಮೋದನೆ ನೀಡಿದ್ದು ಕಾರ್ಯಗತಗೊಳಿಸಲಾಗುತ್ತಿದೆ.

3) ಗುನ್ನಳ್ಳಿಯಲ್ಲಿ ಯೋಜನೆಯನ್ನು ಕೈಗೊಳ್ಳುವ ಬಗ್ಗೆ ಟೆಂಡರ್ ಪ್ರಕ್ರಿಯೆಯು ಅಂತಿಮ ಹಂತದಲ್ಲಿದೆ.

**ಹೋಬಳಿ ಕೇಂದ್ರದಲ್ಲಿ ವಸತಿ ಯೋಜನೆ**

**766(638). ಶ್ರೀ ಬಂಡೆಪ್ಪ ಕಾಶೆಂಪೂರ್:**(ಬೀದರ್ ದಕ್ಷಿಣ) ಮಾನ್ಯ ವಸತಿ, ವಾರ್ತಾ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೋಬಳಿ ಕೇಂದ್ರಗಳಲ್ಲಿ ಗ್ರಾಮೀಣ ಜನರ ಸೌಲಭ್ಯಕ್ಕಾಗಿ ವಸತಿ ಯೋಜನೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು;

ಇ) ಈ ಯೋಜನೆಯಿಂದ ಗ್ರಾಮೀಣ ಪ್ರದೇಶದ ಜನತೆಗೆ ಅನುಕೂಲವಾಗುವುದಿಲ್ಲವೇ;

ಈ) ಹಾಗಿಲ್ಲದಿದ್ದಲ್ಲಿ ಈ ಯೋಜನೆಯನ್ನು ಜಾರಿಗೆ ತರಲು ಸರ್ಕಾರಕ್ಕೆ ಇರುವ ತೊಂದರೆಗಳೇನು?

**ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು(ವಸತಿ, ವಾರ್ತಾ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು)**

ಅ) ಗ್ರಾಮೀಣ ಪ್ರದೇಶದಲ್ಲಿ ರೂ. 63,500/- ಘಟಕದ ವೆಚ್ಚದಲ್ಲಿ ಬಸವ ಇಂದಿರಾ ವಸತಿ ಯೋಜನೆಯನ್ನು ಹಾಗೂ ನಗರ ಪ್ರದೇಶದಲ್ಲಿ ರೂ.1.55ಲಕ್ಷಗಳ ಘಟಕದ ವೆಚ್ಚದಲ್ಲಿ ವಾಜಪೇಯಿ ನಗರ ವಸತಿ ಯೋಜನೆಯನ್ನು 2010-11 ರಿಂದ ಜಾರಿಗೆ ತರಲಾಗಿರುತ್ತದೆ.

ಆ) 2010-11 ರಿಂದ ಈ ಯೋಜನೆಗಳನ್ನು ಜಾರಿಗೆ ತರಲಾಗಿದೆ.